ಎಂದು ಗುರುಗಳಿಗೆ ತಿಳಿದಿದ್ದು ಬಹಳ ವರ್ಷಗಳ ನಂತರವೆ" ಎಂದರು.

"ಯೆಹೂದಿಗಳನ್ನು ಅನಿಲ ಕೋಣೆಗಳಲ್ಲಿ ಉಸಿರುಗಟ್ಟಿ ಸಾಯಿಸುವ ಹಿಂಸಾತ್ಮಕ ಕಾರ್ಯ ಎರಡನೆ ಮಹಾಯುದ್ಧದ ಸಮಯದ ಜರ್ಮನಿಯಲ್ಲಿ ಅವ್ಯಾಹತವಾಗಿ ನಡೆಯಿತು, ಅಲ್ಲವೆ?"

"ನಿಜವೆ. ಆದರೆ ಬೆಗರ್ ಪಾಲ್ಗೊಂಡಿದ್ದ ಕಗ್ಗೊಲೆ ನಡೆದದ್ದು ವಿಜ್ಞಾನದ ಹೆಸರಿನಲ್ಲಿ."

"ವಿಜ್ಞಾನದ ಹೆಸರಿನಲ್ಲಿ? ಏಕೆ?"

"ಯೆಹೂದಿಗಳನ್ನು ಸಿಗಿದು ಅಸ್ಥಿಪಂಜರ ಮಾಡಿ ಮಾನವಶಾಸ್ತ್ರದ ಅಧ್ಯಯನಕ್ಕೆ ಒದಗಿಸಲು. ಇದೆಲ್ಲದರ ರೂವಾರಿ ಸ್ಟ್ರಾಸ್‌ಬರ್ಗ್‌ನಲ್ಲಿದ್ದ ಆಗಸ್ಟ್ ಹಿರ್ಟ್ ಎಂಬ ಮತ್ತೊಬ್ಬ ದುಷ್ಟ ನಾಜಿ ವೈದ್ಯ" ಎಂದು ಒಂದು ಕ್ಷಣ ಮಾತು ನಿಲ್ಲಿಸಿದರು.

"ಆದರೆ ಈ ಯೆಹೂದಿಗಳನ್ನು ಸಾಯಿಸುವುದಕ್ಕೂ, ಆತನ ಆರ್ಯರ ಅಧ್ಯಯನಕ್ಕೂ ಏನು ಸಂಬಂಧ?" ಎಂದು ಕೇಳಿದೆ, ಚರ್ಚೆಯನ್ನು ಆರ್ಯ ಕಣಿವೆಯತ್ತ ಎಳೆದು ತರಲು. ಅವರು ತಕ್ಷಣ ಉತ್ತರಿಸಲಿಲ್ಲ. ದೃಷ್ಟಿ ಮೇಜಿನ ಮೇಲಿತ್ತಾದರೂ ಅವರ ಚಿತ್ತ ಎಲ್ಲೋ ಒಳಗಿನ ನೆನಪುಗಳನ್ನು ಕೆದಕುತ್ತಿದ್ದಂತೆ ಕಂಡಿತು. ಎರಡೇ ಕ್ಷಣಗಳ ಮೌನದ ನಂತರ ಭಾರವಾದ ದನಿಯಲ್ಲಿ,

"ದಯವಿಟ್ಟು ಆ ವಿವರಗಳತ್ತ ನನ್ನ ಚಿತ್ತ ಎಳೆಯಬೇಡಿ. ಅವನ್ನು ನೆನೆದರೆ ನನ್ನ ಎದೆಯಲ್ಲಿ ಸಿಡಿಲು ಬಡಿದಂತಾಗುತ್ತದೆ, ಅತೀವ ಸಂಕಟವಾಗುತ್ತದೆ. ಈಗ ನಿಮ್ಮ ವಿಷಯಕ್ಕೆ ಬನ್ನಿ" ಎಂದರು. ಅವರ ಮಾತಿನ ಸೂಕ್ಷ್ಮತೆಯನ್ನು ಮೂವರೂ ಅರ್ಥ ಮಾಡಿಕೊಂಡೆವು. ಮೌನವಾದೆವು. ನಮ್ಮ ಮೌನ ಕಂಡು ಅವರೇ ಹೇಳಿದರು.

"ನಾನು ಬೆಗರ್‌ನ ಬಗ್ಗೆ ಏನೂ ಹೇಳಲಾಗದು, ಕ್ಷಮಿಸಬೇಕು. ಆದರೆ ನಿಮಗೆ ತಿಳಿದಿರಬಹುದು, ಆರ್ಯರ ಬಗೆಗಿನ ವಿಚಿತ್ರ ನಂಬಿಕೆಗಳು ಪ್ರಾರಂಭವಾದದ್ದೆ ಜರ್ಮನಿಯಲ್ಲಿ."

"ತಿಳಿದಿದೆ. ಮೂಲತಃ ತಾವೇ ಆರ್ಯರು ಎನ್ನುವುದು ನಾಜಿಗಳ ಬಲವಾದ ನಂಬಿಕೆಯಾಗಿತ್ತು ಹಾಗೂ ಆರ್ಯ ಜನಾಂಗ ವಂಶಪಾರಂಪರ್ಯವಾಗಿ ಮೇಧಾವಿಗಳೂ, ಅತ್ಯಂತ ಜ್ಞಾನಿಗಳೂ, ಎನ್ನುವುದು ಅವರ ದೃಢ ನಂಬಿಕೆಯಾಗಿತ್ತು."

"ನಾಜಿಗಳ ಈ ನಂಬಿಕೆ ಕೇವಲ ಆರ್ಯರ ವಂಶಪಾರಂಪರ್ಯತೆಯ ಮೇಲಷ್ಟೆ ಅಲ್ಲ. ಆರ್ಯರ ಅಂದರೆ, ನಾಜಿಗಳ ಬುದ್ಧಿವಂತಿಕೆ ಆನುವಂಶಿಕವಾಗಿ ವಿಶೇಷವಾದ ಧಾತುಗಳಿಂದ ಅವರಲ್ಲಿ ಹರಿದು ಬಂದಿದೆ ಎಂದು ನಂಬಿದ್ದರು. ವಿಪರ್ಯಾಸವೆಂದರೆ ತಾವು ಆರ್ಯರೆಂಬ ನಂಬಿಕೆಯಿಂದಾಗಿಯೆ ಹಲವಾರು ವಿಕೃತ ಸಾಮಾಜಿಕ ದುರಂತಗಳು ನಡೆದುಹೋಗುತ್ತವೆ. ಉದಾಹರಣೆಗೆ, ಯೆಹೂದಿಗಳನ್ನು ಅಯೋಗ್ಯರೂ, ಆರ್ಯರಿಗಿಂತ ಕೆಳ ಮಟ್ಟದ ಕೀಳು ಮಾನವ ಜನಾಂಗದವರೂ ಎಂದು ತೀರ್ಮಾನಿಸಿ, ಅವರನ್ನು ನಿರ್ವಂಶ ಮಾಡಿ, ಯುರೋಪಿನಾದ್ಯಂತ ಶುದ್ಧ ಆರ್ಯ ರಕ್ತವನ್ನೇ ಹರಡುವ ಯೋಜನೆಯನ್ನು ಗಂಭೀರವಾಗಿ ಕೈಗೆತ್ತಿಕೊಂಡಿದ್ದರು. ತಮ್ಮ ಮೂಲ ಕುಲಬಾಂಧವರೆ ಸಾವಿರಾರು ವರ್ಷಗಳ ಹಿಂದೆ ಭಾರತದತ್ತ ವಲಸೆ ಹೋದ ಆರ್ಯರು ಎನ್ನುವುದು ಅವರ ಬಲವಾದ ಸಿದ್ಧಾಂತವಾಗಿತ್ತು. ಅಲ್ಲದೆ ಭಾರತದ ಸ್ಥಳೀಯರು ಮೂಲತಃ ತಿಳಿಗೇಡಿಗಳೂ, ಮೌಢ್ಯರೂ ಎಂದು, ಅವರೊಂದಿಗೆ ತಮ್ಮ ರಕ್ತವನ್ನು ಹಂಚಿಕೊಳ್ಳಲು ಇಚ್ಛಿಸದೆ ಹಾಗೂ ತಮ್ಮ ಆರ್ಯರಕ್ತದ ಶುದ್ಧತೆಯನ್ನು ಸಂರಕ್ಷಿಸಿಕೊಳ್ಳುವ ಸಲುವಾಗಿ ಹಲವಾರು ಕ್ರಮಗಳನ್ನು ರೂಪಿಸಿಕೊಂಡರು ಎಂದು ನಾಜಿಗಳು ದೃಢವಾಗಿ ನಂಬಿದ್ದರು. ಉದಾಹರಣೆಗೆ, ಭಾರತದಲ್ಲಿ ವರ್ಣಗಳನ್ನು ಸೃಷ್ಟಿಸಿ ಅವುಗಳ ನಡುವೆ